ಮೊದಲನೆಯದು, ಕೊಲೆ ನಡೆದ ಅವಧಿ. ಈ ಮೂವರು ಕಕ್ಷಿಗಾರರ ಭೇಟಿಯ ಸಮಯದಲ್ಲೇ ಕೊಲೆ ಸಂಭವಿಸಿದ್ದರಿಂದ ಅನುಮಾನ ಅವರ ಮೇಲೆ ಬರುತ್ತದೆ. ಅವರ ಗಮನಕ್ಕೇ ಮೊದಲು ಕೊಲೆ ನಡೆದಿದ್ದು ಬರಬೇಕಿತ್ತು. ಕೊಲೆ ಅವರಲ್ಲೊಬ್ಬ ಮಾಡದೇ ಇದ್ದಲ್ಲಿ, ಅವರಲ್ಲೊಬ್ಬನೇ ಪೊಲೀಸರಿಗೆ ಮಾಹಿತಿ ನೀಡಿರಬೇಕಿತ್ತು! ಉದಾಹರಣೆಗೆ, ಬೆಟ್ಟಪ್ಪ ಕೊಲೆ ಮಾಡಿದ್ದಲ್ಲಿ, ನಂತರ ಬಂದ ಪಾಲಯ್ಯ ಹೆಣ ಕಂಡು, ಪೊಲೀಸರಿಗೆ ಕರೆ ಮಾಡಬೇಕಿತ್ತು. ಒಂದೊಮ್ಮೆ ಪಾಲಯ್ಯ ಕೊಲೆ ಮಾಡಿದ್ದಲ್ಲಿ, ರುದ್ರಮುನಿ ಪೊಲೀಸರಿಗೆ ತಿಳಿಸಬೇಕಿತ್ತು... ಈ ದೃಷ್ಟಿಯಿಂದ ಅನುಮಾನ ಆ ಮೂವರ ಮೇಲೆಯೇ ಕೇಂದ್ರೀಕೃತವಾಗುತ್ತದೆ. ಎರಡನೆಯದು, ಆ ದಿನ ಸೋಮಯ್ಯ ಕಚೇರಿಗೆ ಬರುವ ವಿಷ್ಯ ತಿಳಿದಿದ್ದುದು ಆ ಮೂವರಿಗೆ ಮಾತ್ರ. ಯಾಕೆಂದರೆ ಸೋಮಯ್ಯ ಭಾನುವಾರ ಕಚೇರಿಗೆ ಬರುವ ಪರಿಪಾಠ ಇಟ್ಟುಕೊಂಡಿಲ್ಲ."

"ರುದ್ರುಮುನಿ ಕುಳ್ಳ ಅಂತ ಡಿಸೋಜ ಹೇಳಿದ. ಪ್ರಾಯಶಃ ಆತನೇ ಪಾಗಾರದ ಮೇಲೆ ಕಲ್ಲಿರಿಸಿ, ಮಹಡಿಯೇರಿ ಬಂದು, ಕಿಟಕಿಯ ಮೂಲಕ ಗುಂಡು ಹಾರಿಸಿ, ಕೊಲೆ ಮಾಡಿರಬೇಕು ಅಂತ ಅನ್ನಿಸುತ್ತೆ!"

"ಅದು ಸಾಧ್ಯ... ಆದ್ರೆ ಕಿಟಕಿಯ ಬಳಿ ನಿಂತು ಅಲ್ಲ!" ಕರಮಚಂದನ ನುಡಿ.

"ಯಾಕೆ?"

"ಸೋಮಯ್ಯನ ಕಿವಿಯ ಬಳಿಯಿದ್ದ ಗುಂಡಿನ ಗಾಯ... ನಾನು ಗುಂಡಿನಿಂದ ದೇಹಕ್ಕಾದ ಗಾಯಗಳ ಬಗ್ಗೆ, ಅರ್ಥಾತ್ ಬ್ಯಾಲಿಸ್ಟಿಕ್ ಟ್ರಾಮಾದ ಬಗ್ಗೆ, ಹೆಚ್ಚಿನ ಅಧ್ಯಯನ ನಡೆಸಿದ್ದೇನೆ. ಅವುಗಳಲ್ಲಿ ಸನಿಹ, ಮಧ್ಯಮ ಮತ್ತು ದೂರ ಎಂಬ ಪ್ರಭೇದಗಳಿದ್ದು, ಗುಂಡು ಹಾರಿಸುವಾಗ ರಿವಾಲ್ವರ್ ದೇಹದಿಂದ ಎಷ್ಟು ದೂರವಿತ್ತು ಅನ್ನುವದರ ಮೇಲೆ ಗಾಯದ ರಚನೆಯಲ್ಲಿ ವ್ಯತ್ಯಾಸಗಳಿರುತ್ತವೆ. ಸೋಮಯ್ಯನಲ್ಲಾದ ಗಾಯದ ರಚನೆ ಗಮನಿಸಿದಾಗ, ಅದು ಕೆಲವಾರು ಮೀಟರುಗಳ ಅಂತರದಿಂದ ಸಿಡಿಸಿದ ಗುಂಡಿನಿಂದ ಆಗಿದ್ದೆಂದು ಹೇಳಬಲ್ಲೆ. ಕಿಟಕಿಯ ಬಳಿಯಿಂದಲೇ ಗುಂಡು ಹಾರಿಸಿದ್ದರೆ, ಗುಂಡು ದೇಹ ಪ್ರವೇಶಿಸುವ ಜಾಗದಲ್ಲಿ ಚರ್ಮದ ಬಿರುಕುಗಳು ಅಷ್ಟಾಗಿ ಇರುವುದು ಸಾಧ್ಯವಿಲ್ಲ."

"ಹಾಗಿದ್ದರೆ ನೀನು ಅನ್ನುವುದೇನು?"

"ಅದು ನನಗೂ ಅರ್ಥವಾಗ್ತಿಲ್ಲ. ಹತ್ತಿರದಲ್ಲಿ ಮರಗಳೇನೂ ಇಲ್ಲ, ಮರದಲ್ಲಿ ಕುಳಿತು ಗುಂಡು ಹಾರಿಸಿದ್ದಾರೆ ಎನ್ನಲು."

"ಹತ್ತಿರದ ಕಟ್ಟಡದಲ್ಲಿ ಕಿಟಕಿಯೂ ಇಲ್ಲ... ಹಾಗಿದ್ದರೆ ಗುಂಡು ಎಲ್ಲಿಂದ ಹಾರಿಸಿದ್ದಾರೆ? ಯಾರು?"

"ಯಾರೇ ಇರಲಿ, ಆತ ಬುದ್ಧಿವಂತ ಅನ್ನಲು ಅಡ್ಡಿಯಿಲ್ಲ."

ಗಟ್ಟಿಯಾಗಿ ನಕ್ಕ ಕರಮಚಂದ.

★★★

ಆ ದಿನವಿಡೀ ಕರಮಚಂದ ನಾಪತ್ತೆಯಾಗಿದ್ದ. ರಾತ್ರಿ ಎಂಟರ ಹೊತ್ತಿಗೆ ಕರಮಚಂದ ಕರೆಮಾಡಿ, ತಕ್ಷಣ ಕೊಟ್ಟಮುಡಿಗೆ ಬರುವಂತೆ ಸೂಚಿಸಿದ. ನಾನು ಅತೀ ಆತುರದಿಂದ ಹೊರಟೆ.

ಪುಟ್ಟ ಹಳ್ಳಿ ಕೊಟ್ಟಮುಡಿ. ಪಾಲಯ್ಯ ಕೊನೆಗೂ ಅಲ್ಲಿ ಸಿಕ್ಕಿದ್ದ!

"ಪಾಲಯ್ಯ, ನೀನು ಎಷ್ಟು ಹೊತ್ತಿಗೆ ಸೋಮಯ್ಯನ ನೋಡೋಕೆ ಬಂದೆ?" ಡಿಸೋಜ ಪೊಲೀಸ್ ಶೈಲಿಯಲ್ಲಿ ವಿಚಾರಿಸಿದ.

"ಸರಿಯಾಗಿ ಹನ್ನೊಂದು ಗಂಟೆಗೆ ಸಾರ್! ನಾನು ಕಚೇರಿ ಪ್ರವೇಶಿಸಿದಾಗ ಗಡಿಯಾರ ಅದೇ ಸಮಯ ತೋರುತ್ತಿತ್ತು."

"ಹಾಗಿದ್ರೆ ನೀವು ಹನ್ನೊಂದೂವರೆಗಷ್ಟೆಗೆ ಬಂದಿದ್ದು! ಆ ಗಡಿಯಾರ ಅರ್ಧ ತಾಸು ಹಿಂದೆ ಇದೆ!" ಕರಮಚಂದ ಘೋಷಿಸಿದ.